ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/04/ಪದವಿ ಶುಲ್ಕ/2017-18

ದಿನಾಂಕ:17.05.2017

## ಸುತ್ತೋಲೆ

ವಿಷಯ: 2017-18ನೇ ಸಾಲಿಗೆ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಪದವಿ ಕೋರ್ಸುಗಳಿಗೆ ಶುಲ್ಕ ನಿಗಧಿಗೊಳಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ/77/ಯುಇಸಿ/2017, ದಿ:17.05.2017.

* * * * * *

ಉಲ್ಲೇಖಿತ ಸರ್ಕಾರದ ಪತ್ರದನ್ವಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಪದವಿ ಕೋರ್ಸುಗಳಿಗೆ 2017-18ನೇ ಶೈಕ್ಷಣಿಕ ಸಾಲಿಗೆ ಶುಲ್ಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ಅದರಂತೆ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಈ ಕೆಳಕಂಡಂತೆ ನಿಗದಿಪಡಿಸಿದ ಶುಲ್ಕಗಳನ್ನು ಪಡೆಯಲು ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.

| ಕ್ರ. ಸಂ. | ಶುಲ್ಕದ ವಿವರ | ಶುಲ್ಕ(ರೂ.) |
|---|---|---|
| 1. | ಅರ್ಜಿ ಶುಲ್ಕ | ಉಚಿತ |
| 2. | ಪ್ರವೇಶ ಶುಲ್ಕ | 80.00 |
| 3. | ಪಾಠ ಶುಲ್ಕ | 940.00 |
| 4. | ಪ್ರಯೋಗಾಲಯ ಶುಲ್ಕ | 260.00 |
| 5. | ವೈದ್ಯಕೀಯ ತಪಾಸಣಾ ಶುಲ್ಕ | 30.00 |
| 6. | ವರ್ಗಾವಣೆ ಪತ್ರ ಶುಲ್ಕ | 40.00 |
| 7. | ವಿದ್ಯಾಭ್ಯಾಸ ಪ್ರಮಾಣ ಪತ್ರ ಶುಲ್ಕ | 20.00 |
| 8. | ವಾಚನಾಲಯ ಶುಲ್ಕ | 70.00 |
| 9. | ಕ್ರೀಡಾ ಶುಲ್ಕ | 70.00 |
| 10. | ಗ್ರಂಥಾಲಯ ಶುಲ್ಕ(ಬೈಂಡಿಂಗ್ ಸೇರಿ) | 70.00 |
| 11. | ಕಾಲೇಜು ಅಭಿವೃದ್ಧಿ ಶುಲ್ಕ (ಸರ್ಕಾರಿ ಕಾಲೇಜುಗಳಿಗೆ ಮಾತ್ರ)<br>(ಸರ್ಕಾರಿ ಆದೇಶ ಸಂಖ್ಯೆ: ಇಡಿ:89:ಯುಇಸಿ:2001, ದಿ:13.01.2003. | 100.00 |
| 12. | ಅ) ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ.<br>ಆ) ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ. | 25.00<br>25.00 |
| 13. | ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರೋವರ್ ಮತ್ತು ರೇಂಜರ್ ಘಟಕ ಪ್ರಾರಂಭಿಸಲು ಹಾಗೂ ಘಟಕಗಳ ಚಟುವಟಿಕೆ ಶುಲ್ಕ.<br>(ಸರ್ಕಾರಿ ಆದೇಶ ಸಂಖ್ಯೆ:ಇಡಿ:46:ವಿವಿಧ:2010, ದಿನಾಂಕ:23.11.2011). | 50.00 |
| 14. | ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಶುಲ್ಕ<br>(ಸರ್ಕಾರಿ ಆದೇಶ ಸಂಖ್ಯೆ:ಇಡಿ:64:ವಿವಿಧ:2011, ದಿನಾಂಕ:22.12.2011.) | 50.00 |
| 15. | ಎನ್.ಎಸ್.ಎಸ್. ಶುಲ್ಕ ಅ) ಘಟಕ ಇಲ್ಲದ ಕಾಲೇಜುಗಳಲ್ಲಿ<br>ಆ) ಒಂದು ಘಟಕ ಇರುವ ಕಾಲೇಜುಗಳಲ್ಲಿ<br>(ಸರ್ಕಾರಿ ಆದೇಶ ಸಂಖ್ಯೆ:ಇಡಿ:11:ವಿವಿಧ:2015, ದಿ:04.05.2015). | 50.00<br>40.00 |

| | | |
|---|---|---|
| 16. | ನೋಂದಣಿ ಶುಲ್ಕ | ಆಯಾ ವಿಶ್ವವಿದ್ಯಾಲಯಗಳು ನಿಗದಿಪಡಿಸಿದಂತೆ |
| 17. | ವಿಶ್ವವಿದ್ಯಾಲಯ ಪರೀಕ್ಷಾ ಶುಲ್ಕ | |
| 18. | ಕ್ರೀಡಾ ಅಭಿವೃದ್ಧಿ ಶುಲ್ಕ | |

1) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 33 ಯುಇಸಿ 2012, ದಿನಾಂಕ:07.08.2012 ರನ್ವಯ ಕಾಲೇಜು ಅಭಿವೃದ್ಧಿ ಸಮಿತಿಯ ಹೆಸರಿನಲ್ಲಿ ಪ್ರತಿ ವಿದ್ಯಾರ್ಥಿಯಿಂದ ವರ್ಷಕ್ಕೊಮ್ಮೆ ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರವೇಶ ಶುಲ್ಕದ ಜೊತೆಗೆ ರೂ.150/- ರಿಂದ ರೂ.600/- ರವರೆಗೆ ಮಾತ್ರ ಸಂದರ್ಭಾನುಸಾರ ಸಂಗ್ರಹಿಸಲು.

2) ಖಾಸಗಿ ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ, ನಿಗದಿತ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಸಂಗ್ರಹಿಸಿ ಜಮಾ ಮಾಡುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 139 ಯುಪಿಸಿ 2014, ದಿನಾಂಕ:18.10.2014ರಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) 2003 ರ ನಿಯಮ 18(4)ಕ್ಕೆ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮ ವಹಿಸಲು.

3) ವಿದ್ಯಾರ್ಥಿ ಸಂಘ, ಸಾಂಸ್ಕೃತಿಕ ಚಟುವಟಿಕೆಗಳು, ಕಾಲೇಜು ಮ್ಯಾಗಜೈನ್, ಕಾಲೇಜಿನ/ಗ್ರಂಥಾಲಯದ ಗುರುತಿನ ಚೀಟಿಗಳಿಗೆ ಸಂಬಂಧಿಸಿದ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಹೊರೆಯಾಗದಂತೆ ಸಂಬಂಧಿಸಿದ ಕಾಲೇಜಿನ ಸಮಿತಿಯು ನಿರ್ಣಯಿಸತಕ್ಕದ್ದು.

4) ಪ್ರವೇಶ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪದವಿ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳಿಂದ ಮಾತ್ರ ವಸೂಲಿ ಮಾಡುವುದು.

12/5/17

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:-**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಗುಲಬರ್ಗಾ-ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- (ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ).
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು - ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

**ಪ್ರತಿ ರವಾನೆ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಶಿಕ್ಷಣ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560002.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ.
6. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.26, ರೆಡ್ ಕ್ರಾಸ್ ಭವನ, ಒಂದನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001.
7. ರಾಜ್ಯ ಕಾರ್ಯದರ್ಶಿಗಳು, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, ಶಾಂತಿ ಗೃಹ, ನಂ.39, ಅರಮನೆ ರಸ್ತೆ, ಬೆಂಗಳೂರು-560 001.

**ಅಂತರಿಕ:-**

1. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು.
2. ಕಛೇರಿ ಪ್ರತಿ
3. ಹೆಚ್ಚುವರಿ ಪ್ರತಿಗಳು.